ದೇವಿಯ ಮುಡಿ ಹಿಡಿದೆಳದದ್ದು ನೆನಪಿಗೆ ಬಂತು ಭೀಮನಿಗೆ.
ಮುಟ್ಟಾದವಳ ಬಟ್ಟೆ ಎಳೆದದ್ದು,
ಗಂಡಂದಿರ ಮುಂದೆಯೇ ಎಳಕೊಂಡು ಬಂದು ಅವಳಿಗೆ ಏನೆಲ್ಲ ದುಃಖ ಕೊಟ್ಟನಲ್ಲ.
ನೆನಪಿನ ಬೆಂಕಿಗೆ ತುಪ್ಪ ಬಿದ್ದ ಹಾಗೆ ಕೋಪದ ಬೆಂಕಿ ಏರಿತಿತ್ತು.
ಅಲ್ಲೇ ಕರ್ಣ, ದುರ್ಯೋಧನ, ಕೃಪ, ದ್ರೋಣನ ಮಗ ಎಲ್ಲಾ ಇದ್ದರು.
'ಈ ಪಾಪೀನ ಈಗ ಕೊಲ್ತೀನಿ, ಎಲ್ಲಾ ಯೋಧರೂ ಬಂದು ಬಿಡಿಸಿಕೊಳ್ಳಿ ನೋಡಣ'
ಹೀಗಂದ, ಆ ಬಲಶಾಲಿ ಸಲಗಾನ ಸಿಂಹ ಕೆಡವಿದ ಹಾಗೆ ಈ ಏಕವೀರ ಆ ಅತಿರಥರ ಮುಂದೇನೆ ಅವನ ಕುತ್ತಿಗೆಯನ್ನ ಕಾಲಲ್ಲಿ ಮೆಟ್ಟಿದ.
ಕರ್ಣ, ಸುಯೋಧನರಿಗೆ ಕೇಳಿಸುವ ಹಾಗೇನೇ
'ಎಲ್ಲಿ ಆ ನಿನ್ನ ಕೈ ತೋರಿಸು,
ರಾಜಸೂಯದ ತೀರ್ಥ ಬಿದ್ದು ಪವಿತ್ರವಾಗಿರೋ ಯಜ್ಞಸೇನಿಯ ಮುಡೀನ ಎಳೀತಲ್ಲಾ ಯಾವ ಕೈ ಅದು, ತೋರಿಸು.'
ಭೀಮನ ದನಿ ಘನಘೋರವಾಗಿತ್ತು
ಭೀಮಸೇನ ಅಟ್ಟಹಾಸದ ನಗು ತುಂಬಿಕೊಂಡು ಉರೀತಾ ಇದ್ದ
ದುಶ್ಶಾಸನ ಭೀಮನನ್ನು ದುರುಗುಟ್ಟಿಕೊಂಡು ನೋಡಿದ
ಅವನೂ ಕೌರವ ಸೋಮಕರಿಗೆಲ್ಲಾ ಕೇಳುವ ಹಾಗೆ ಗರ್ವದಿಂದ
'ಇದು ಕಣೋ ಆ ಕೈ
ಹೇಗೆ ಸೊಂಡಿಲ ಥರ ಇದೆ ನೋಡು
ಭಾರಿ ಭಾರಿ ಮೊಲೆಗಳನ್ನ ಹಿಸುಕಿದ ಕೈ ಇದು
ಸಾವಿರಾರು ಗೋವುಗಳನ್ನು ದಾನ ಮಾಡಿದ ಕೈ
ಎಷ್ಟೋ ಕ್ಷತ್ರಿಯರನ್ನ ಕೊಂದ ಕೈ
ಆ ನಿನ್ನ ಯಾಜ್ಞಸೇನಿಯ ಕೂದಲನ್ನೂ ಕೆದರಿದ ಕೈ
ಅವತ್ತಿನ ಸಭ್ಯರ ಸಭೆಯಲ್ಲಿ ದೊಡ್ಡ ದೊಡ್ಡವರ ಜತೆ ಕೂತು ನೋಡ್ತಾನೇ ಇದ್ದಿರಲ್ಲ ಈ ಕೈನ'
ಹೀಗೆ ರಾಜಪುತ್ರ ರಣರಂಗದಲ್ಲಿ ಕೈಯೆತ್ತಿ ತೋರಿಸಿದ
ಭೀಮ ಅವನ ಎದೆಯನ್ನ ಮೆಟ್ಟಿ ಎರಡೂ ಕೈಯನ್ನ ಬಲವಾಗಿ ಎಳೀತಾ
ಸಿಂಹನಾದ ಮಾಡತಾ ಸಮಸ್ತ ಯೋಧರಿಗೂ
'ಇವನ ತೋಳು ಮುರೀತಾ ಇದೀನಿ, ತಾಕತ್ತಿದ್ದರೆ ಬಿಡಿಸಿ ಬನ್ನಿ' ಅಂದ.
ಅವರೆಲ್ಲಾ ನೋಡತಾ ಇರೋವಾಗಲೇ ಸಿಡಿಲಿಗೆ ಸಮನಾದ ಮುಷ್ಟಿಯಿಂದ ಗುದ್ದಿ ಗುದ್ದಿ ಆ ದುಶ್ಶಾಸನನ ಎರಡೂ ಭುಜವನ್ನು ಕಿತ್ತುಹಾಕೇ ಬಿಟ್ಟ.
ನಡುಗುತ್ತಾ ಇರುವ ಅವನ ಕತ್ತನ್ನ ಮೆಟ್ಟಿ ಕತ್ತಿಯಿಂದ ಎದೆ ಸೀಳಿದ ಬೆಚ್ಚಗಿನ ಎದೆಯ ರಕ್ತ ಮೊಗೆದು ಸುತ್ತಾ ನೋಡತಾ— ಚಪ್ಪರಿಸತಾ
ಸುತ್ತಾ ನೋಡತಾ ಚಪ್ಪರಿಸತಾ ಕೋಪ ಇನ್ನೂ ತುಂಬಿಕೊಂಡೇ ಇದ್ದ.
'ನಾನು ಹಾಲು ಕುಡಿದಿದೀನಿ
ಜೇನುತುಪ್ಪ ಕುಡಿದಿದೀನಿ
ಮಾಧ್ವೀಕ ಅನ್ನೋ ಹೆಂಡ ಕುಡಿದಿದೀನಿ
ಲೋಕದಲ್ಲಿರೋ ಎಲ್ಲಾ ಥರದ ಪಾನವನ್ನೂ ರುಚಿ ನೋಡೀದೀನಿ
ಆದರೆ ಈಗ ಕುಡೀತಿದೀನಲ್ಲಾ ನನ್ನ ಶತ್ರುವಿನ ರಕ್ತ
ಇದೇ ಎಲ್ಲಕ್ಕಿಂತ ರುಚಿ.'
ಹಾಗಂತ ಆ ಉಗ್ರಕರ್ಮಿ ಜೀವ ಹೋಗಿರೋ ದುಶ್ಶಾಸನನನ್ನು ಸಿಟ್ಟಿನಲ್ಲಿ ನೋಡತಾ
'ಲೋ, ನಿನ್ನನ್ನ ಮೃತ್ಯು ಕಾಪಾಡಿ ಬಿಡ್ತು. ಏನು ಮಾಡಲಿ ಹೇಳು' ಎನ್ನುತ್ತಾ ಮತ್ತೆ ಮತ್ತೆ ರಕ್ತ ಮೊಗೆಮೊಗೆದು ಕುಡಿದ.
ಅವನನ್ನು ನೋಡಿದ ಆ ಮನುಷ್ಯರ ಕೈಯಿಂದ ಶಸ್ತ್ರಗಳು ಜಾರಿಬಿದ್ದವು. ಕೆಲವರು ಮೂರ್ಛೆಹೋಗಿ ಕೆಳಕ್ಕೆ ಬಿದ್ದರು. ಕೆಲವರು ನೋಡಲಾಗದೆ ಓಡಿದರು.
ಅವನನ್ನು ನೋಡಿದವರೆಲ್ಲ 'ಇವನು ಮನುಷ್ಯ ಅಲ್ಲ' ಎಂದರು.



# ಸಾಯೋನಿಗೆ ಔಷಧ ಒಲ್ಲದು

**ವೈಶಂಪಾಯನ:** ಕೃಪನ ಮಾತಿಗೆ, ಧೃತರಾಷ್ಟ್ರನ ಮಗ ಬಿಸಿಯಾದ ನಿಟ್ಟುಸಿರು ಬಿಡುತ್ತಾ ಮಾತಿಲ್ಲದೆ ಹಾಗೇ ಒಂದು ಗಳಿಗೆ ತನ್ನೊಳಗೇ ಇದ್ದ.
ಆಮೇಲೆ ಹೀಗಂದ: 'ನೀನು ನನಗೆ ಬೇಕಾದ್ದೆಲ್ಲ ಮಾಡಿದೀಯ. ಯುದ್ಧದಲ್ಲಿ ಪ್ರಾಣ ಕೊಡೋಕೂ ಸಿದ್ಧವಾಗಿರೋನು ನೀನು
ಸೈನ್ಯದೊಳಗೆ ನುಗ್ಗಿ ಮಹಾರಥರ ಜತೆ ಕಾದಾಡಿದೀಯ. ಅಂಥ ಪಾಂಡವರ ಜತೆ ಹಾಗೆ ಹೋರಾಡಿದ್ದನ್ನ ನಾನೇ ಕಣ್ಣಾರೆ ನೋಡೀದೀನಿ. ನೀನು ಒಳ್ಳೆ ಮನಸಿನಿಂದಲೇ ಹೇಳತಿದಿ. ನಾನೂ ಪ್ರೀತಿಯಿಂದಲೇ ಕೇಳಿಸಿಕೊಂಡಿದೀನಿ. ನೀನು ಹಿತವಾದದ್ದನ್ನೇ ಹೇಳತಿದೀಯ. ನಿನ್ನ ಮಾತೂ ಸರಿಯಾದ ದಾರೀನೇ ಹೇಳತಿದೆ. ಆದರೆ ಸಾಯೋನಿಗೆ ಔಷಧ ಒಲ್ಲದು ಅನಿಸೋ ಹಾಗೆ ನಿನ್ನ ಸಂಧಿಯ ಮಾತು ನನಗೆ ಹಿಡಿಸತಾ ಇಲ್ಲ.
ನಾವೇ ಅವನ ರಾಜ್ಯ ಕಿತ್ತುಕೊಂಡವಿ. ಅವನನ್ನ ಜೂಜಿನಲ್ಲಿ ನಾವೇನೇ ಸೋಲಿಸಿದಿವಿ. ಈಗ ನನ್ನ ಮಾತನ್ನ ಕೇಳತಾನಾ ಅವನು?
ಕುಂತೀ ಮಕ್ಕಳ ಹಿತವನ್ನೇ ಬಯಸೋನು ಆ ಕೃಷ್ಣ
ಅವನೇ ದೂತನಾಗಿ ಸಂಧಿಗೆ ಬಂದ. ಅವನ ಮಾತನ್ನ ಲೆಕ್ಕಕ್ಕೇ ತೆಗೆದುಕೊಳ್ಳಲಿಲ್ಲ ನಾನು
ನನ್ನ ಮಾತಿಗೆ ಈಗ ಯಾಕಾದರೂ ಬೆಲೆ ಕೊಡತಾನೆ ಹೇಳು
ಆ ಕೃಷ್ಣೇನ ಸಭಾ ಮಧ್ಯದಲ್ಲಿ ಗೋಳಾಡಿಸಿದ್ದನ್ನ,
ರಾಜ್ಯ ಕಿತ್ತುಕೊಂಡದ್ದನ್ನ ಅವನು ಎಂದೂ ಮರೆಯಲ್ಲ.
ಕೃಷ್ಣನೂ ಪಾರ್ಥನೂ ಒಂದೇ ಜೀವ ಅನ್ನೋ ಅಷ್ಟು ಅಂಟಿಕೊಂಡಿರೋರು ಅಂತ ಕೇಳಿದ್ದೆ
ಈಗ ಕಣ್ಣಾರೆ ನೋಡತಾ ಇದೀನಿ
ತನ್ನ ತಂಗೀ ಮಗನ ಕೊಲೆ ನೆನೆದು ನಿದ್ದೇಲೂ ಅಳತಿರತಾನೆ
ದುಃಖವೇ ಅವನೊಳಗೆ ಮಲಗಿದೆ
ಕೊಂದವರು ನಾವು. ಕೇಶವ ಕ್ಷಮಿಸೋದು ಸಾಧ್ಯಾನಾ?
ಅಭಿಮನ್ಯು ಸತ್ತ ಹೊತ್ತಿನಿಂದ ಅರ್ಜುನ ನೆಮ್ಮದೀಲಿಲ್ಲ. ಬೇಡಿಕೊಂಡರೂ ಅವನು ನನ್ನ ಹಿತಕ್ಕೆ ಹುಂ ಅನ್ನಲ್ಲ. ಆ ಭೀಮ ಮೊದಲೇ ಬಲಶಾಲಿ. ನಾಲಿಗೇನೂ ಮೊನಚು ಶಪಥ ಬೇರೆ ಮಾಡಿದಾನೆ. ಎರಡು ಸೀಳು ಮಾಡಿದರೂ ಅವನು ಬಗ್ಗಲ್ಲ. ಇನ್ನು ಆ ಇಬ್ಬರು ನನ್ನ ಮೇಲೆ ಕತ್ತಿ ಮಸೀತಾನೇ ಇದಾರೆ. ಸದಾ ಕತ್ತಿ ಹಿಡಕೊಂಡು ಕವಚ ಕಟ್ಟಿಕೊಂಡೇ ಇರತಾರೆ. ಯಮನಿಗೆ ಸಮನಾದೋರು ಆ ಅವಳಿ ಜವಳಿ.
ಧೃಷ್ಟದ್ಯುಮ್ನ ಶಿಖಂಡಿಗೆ ನನ್ನ ಕಂಡರೇನೇ ಆಗಲ್ಲ. ಅವರು ನನ್ನ ಹಿತಕ್ಕೆ ಬರತಾರಾ
ಮುಟ್ಟಾಗಿ ಒಂದೇ ಬಟ್ಟೇಲಿದ್ದವಳನ್ನ ಸಭೆ ಮಧ್ಯಕ್ಕೆ ಎಳಕೊಂಡು ಬಂದ ದುಶ್ಶಾಸನ
ಎಲ್ಲರ ಕಣ್ಣೆದುರೇ ಅವಳ ಬಟ್ಟೆ ಸೆಳೆದು ದಿಕ್ಕೆಡಿಸಿದ್ದನ್ನ ಪಾಂಡವರು ಮರೆಯೋದುಂಟಾ
ಅವಳೂ ಆ ವೈರದ ಯಾತನೆ ಸಹಿಸೋಕಾಗದೆ ಈಗಲೂ ಮಣ್ಣಿನ ಮೇಲೆ ಮಲಗತಾಳೆ
ಗಂಡಂದಿರು ಗೆಲ್ಲಲಿ ಅಂತ ಉಗ್ರ ತಪಸ್ಸು ಮಾಡತಿದಾಳೆ ಅವಳು
ಆ ವಾಸುದೇವನ ತಂಗೀನೇ ಜಂಬ ಇಲ್ಲದೆ ದ್ರೌಪದೀನ ಉಪಚಾರ ಮಾಡತಿದಾಳೆ
ಎಲ್ಲ ಹತ್ತಿಕೊಂಡಾಗಿದೆ. ಇನ್ನು ಏನು ಮಾಡಿದರೂ ಆರಲ್ಲ.

(ಸಶೇಷ)